'ನನ್ನ ದೊಡ್ಡ ತೊಂದರೆ ಎಂದರೆ ಆ ಕೋಣೆಯೊಳಗೆ ಹೋಗದೇ ಇರುವುದು. ನೀನು ಕದ ತೆಗೆದ ಹೊರತು ನಾನು ಇಲ್ಲಿಂದ ಕದಲುವುದಿಲ್ಲ' ಎಂದು ರಾಜಕುಮಾರ ಹಟಹಿಡಿದನು.

ಭಾರವಾದ ಹೃದಯದಿಂದ ಜಾನ್ ಕೋಣೆಯ ಬಾಗಿಲನ್ನು ತೆಗೆದನು. ಅಲ್ಲಿ ಗೋಡೆಯ ಮೇಲೆ ತೂಗು ಹಾಕಿದ್ದ ಅಪೂರ್ವ ಸುಂದರಿಯೋರ್ವಳ ಚಿತ್ರವನ್ನು ನೋಡಿ, ರಾಜಕುಮಾರ ಬೆರಗಾಗಿ ಮೂಕನಂತೆ ನಿಂತನು. ಅವನಿಗೆ ಅಲ್ಲಿಂದ ಕಣ್ಣು ಕೀಳಲಾಗಲಿಲ್ಲ. ಜಾನನ ಕಡೆಗೆ ತಿರುಗಿ 'ಯಾರು ಈ ಸುರಸುಂದರಿ?' ಎಂದು ಕೇಳಿದನು. 'ಅವಳು ಚಿನ್ನದ ಮಾಳಿಗೆಯುಳ್ಳ ಅರಮನೆಯ ರಾಜನ ಮಗಳು. ದೂರ ದೇಶದವಳು' ಎಂದನು ಜಾನ್.

'ಜಾನ್ ನಾನು ಇವಳನ್ನು ತುಂಬಾ ಪ್ರೀತಿಸುತ್ತೇನೆ. ಎಷ್ಟೆಂದರೆ ಮರದ ಮೇಲಿರುವ ಎಲ್ಲ ಎಲೆಗಳಿಗೂ ನಾಲಿಗೆ ಬಂದರೂ ನನ್ನ ಪ್ರೀತಿಯು ಎಷ್ಟೆಂದು ಬಣ್ಣಿಸಲಾರವು. ಏನಾದರೂ ಮಾಡಿ ಇವಳನ್ನು ನನ್ನವಳನ್ನಾಗಿ ಮಾಡಿಕೊಳ್ಳುತ್ತೇನೆ' ಎಂದನು ರಾಜಕುಮಾರ ಉತ್ಸಾಹದಿಂದ. ಪಾಪ, ಜಾನನ ಮೋರೆ ಸಪ್ಪಗಾಯಿತು. ಅವನು ಯಾವುದೋ ಯೋಚನೆಯಲ್ಲಿ ಮುಳುಗಿದನು. ಕಡೆಗೆ ಹೇಳಿದನು:

'ಈ ರಾಜಕುಮಾರಿಗೆ ಚಿನ್ನವೆಂದರೆ ತುಂಬಾ ಇಷ್ಟ. ಅವರ ಅರಮನೆಯಲ್ಲಿರುವ ಕುರ್ಚಿ, ಮೇಜು, ಬಟ್ಟಲು, ತಟ್ಟೆ ಎಲ್ಲವನ್ನೂ ಚಿನ್ನದಲ್ಲೇ ಮಾಡಿದ್ದರೂ ಅವಳ ಚಿನ್ನದ ಹುಚ್ಚು ಬಿಟ್ಟಿಲ್ಲ. ಮತ್ತೆ ಮತ್ತೆ ಚಿನ್ನದ ಹೊಸ ಹೊಸ ವಸ್ತುಗಳಿಗೆ ಆಸೆ ಪಡುವುದು ಅವಳ ಜಾಯಮಾನ. ಈಗ ನಮಗಿರುವ ದಾರಿಯೆಂದರೆ ನಮ್ಮ ಅರಮನೆಯ ಚಿನ್ನವನ್ನೆಲ್ಲ ಕರಗಿಸಿ ಹೊಸ ಬಗೆಯ ಪಾತ್ರೆಗಳು, ಪಕ್ಷಿ, ಪ್ರಾಣಿಗಳು ಇವುಗಳನ್ನು ಮಾಡಿಸಿ, ಅವನ್ನು ಮಾರಾಟ ಮಾಡುವ ವರ್ತಕರಂತೆ ಅವರ ಅರಮನೆಗೆ ಹೋಗುವುದು' ಎಂದನು.

ಅದರಂತೆ ಇಬ್ಬರೂ ಒಂದು ಹಡಗಿನ ತುಂಬಾ ಚಿನ್ನದ ಸಾಮಾನುಗಳನ್ನು ಅಣಿ ಮಾಡಿಕೊಂಡು ಅವಳ ದೇಶಕ್ಕೆ ಪ್ರಯಾಣ ಬೆಳೆಸಿದರು. ಅಲ್ಲಿಗೆ ತಲುಪುತ್ತಲೇ ಜಾನ್ ರಾಜಕುಮಾರನಿಗೆ ಹಡಗಿನಲ್ಲೇ ಇರುವಂತೆ ಹೇಳಿ, ತಾನು ಕೆಲವು ಚಿನ್ನದ ಸಾಮಾನುಗಳನ್ನು ತೆಗೆದುಕೊಂಡು ಅವರ ಅರಮನೆಗೆ ಹೋದನು. ರಾಜಕುಮಾರಿ ಅವುಗಳನ್ನು ಕಂಡ ಕೂಡಲೇ ಸಂತೋಷದಿಂದ ಚಪ್ಪಾಳೆ ತಟ್ಟುತ್ತ, 'ಓ ಎಷ್ಟು ಸುಂದರವಾಗಿವೆ! ನಾನು ಅವೆಲ್ಲವನ್ನೂ ಕೊಳ್ಳುತ್ತೇನೆ' ಎಂದಳು. ಜಾನ್, 'ರಾಜಕುಮಾರಿ ನಾನು ಒಬ್ಬ ಶ್ರೀಮಂತ ವ್ಯಾಪಾರಿಯ ಸೇವಕ ಮಾತ್ರ. ಅವನು ತನ್ನ ಹಡಗಿನಲ್ಲಿ ಇನ್ನೂ ಇಂತಹ ಬೇಕಾದಷ್ಟು ಸಾಮಾನುಗಳನ್ನು ಇಟ್ಟುಕೊಂಡು ನನಗಾಗಿ ಕಾಯುತ್ತಿದ್ದಾನೆ' ಎಂದನು.

'ಅವನಿಗೆ ಎಲ್ಲವನ್ನೂ ಇಲ್ಲಿಗೆ ತರಲು ಹೇಳು. ನಾನು ಅವೆಲ್ಲವನ್ನೂ ನೋಡಬೇಕು' ಎಂದಳು ರಾಜಕುಮಾರಿ.

'ಅಯ್ಯೋ ಅಯ್ಯೋ ಅವು ಲೆಕ್ಕಕ್ಕೆ ಸಿಗದಷ್ಟು ಇವೆ. ಎಲ್ಲವನ್ನೂ ತರುವುದೆಂದರೆ ಎಷ್ಟೋ ದಿನಗಳು ಹಿಡಿಸುತ್ತವೆ' ಎಂದನು ಜಾನ್.

'ಹಾಗಾದರೆ ನನ್ನನ್ನೇ ಹಡಗಿಗೆ ಕರೆದುಕೊಂಡು ಹೋಗು. ನಾನು ಅಲ್ಲೇ ನೋಡುತ್ತೇನೆ' ಎಂದು ಅವಸರಪಡಿಸಿದಳು.

ಜಾನನಿಗೆ ಬೇಕಾಗಿದ್ದುದು ಅದೇ. ಅವನು ಸಂತೋಷದಿಂದ ಅವಳನ್ನು ಕರೆದುಕೊಂಡು ಹೋದನು. ರಾಜಕುಮಾರಿ ಬರುವುದನ್ನು ಕಂಡ ಕೂಡಲೇ ಹಡಗಿನಲ್ಲಿದ್ದ ರಾಜಕುಮಾರನಿಗೆ ಸಂತೋಷದಿಂದ ಎದೆಬಿರಿಯುವಂತಾಯಿತು. ಅವನು ಆನಂದದಿಂದ ಮುಂದೆ ಬಂದು 'ಬಾ